(models) ಮಾಡಿ, ದೇವರಿಗೆಂದು ಬಂಗಾರದ ಒಡವೆಗಳನ್ನು ಮಾಡಲು ಅಕ್ಕಸಾಲಿಗರ ಬಳಿ ಕಳುಹಿಸುತ್ತಿದ್ದರು. ಬಾಬಾ ಅವರು ಕಳುಹಿಸಿದ ಮಾದರಿಯ ಪ್ರಕಾರ ಅಕ್ಕಸಾಲಿಗರು ಬಂಗಾರದ ಒಡವೆಗಳನ್ನು ಮಾಡಲು ಒಮ್ಮೆಲೇ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಮತ್ತೆ ಮತ್ತೆ ಪ್ರಯತ್ನಿಸಬೇಕಾಗುತ್ತಿತ್ತು. ಬಾಬಾ ಅವರ ಈ ಕರಕುಶಲತೆಗೆ ಅಕ್ಕಸಾಲಿಗರು ತಲೆಬಾಗುತ್ತಿದ್ದರು.

ಬಾಬಾ ತಮ್ಮ ತಪಸ್ಸಿನ ಸಮಯದಲ್ಲಿ ಹಲವಾರು ಧಾರ್ಮಿಕ ಗ್ರಂಥಗಳು ಬೇಕು ಎಂದು ಕೇಳುತ್ತಿದ್ದರು. ಇದಲ್ಲದೆ ಬರವಣಿಗೆಗೆ ಬೇಕಾದ ಸಾಮಗ್ರಿಗಳನ್ನು ಕೂಡ ಕೇಳುತ್ತಿದ್ದರು. ಹಲವಾರು ಬೃಹತ್ ಗ್ರಂಥಗಳನ್ನು ತಮ್ಮ ಸುಂದರ ಬರವಣಿಗೆಯಲ್ಲಿ ಬರೆದಿಡುತ್ತಿದ್ದರು. ದುರದೃಷ್ಟವಶಾತ್ ಅವುಗಳಲ್ಲಿ ಬಹುತೇಕ ಗ್ರಂಥಗಳು ನಾಶವಾಗಿವೆ. ಲಭ್ಯವಿರುವ ಗ್ರಂಥಗಳನ್ನು ನೋಡಿದಾಗ ಅವರ ಸುಂದರ ಬರವಣಿಗೆಯನ್ನು ಕಂಡು ಮನಸ್ಸು ಪ್ರಫುಲ್ಲಿತವಾಗುತ್ತದೆ. ಶ್ರೀಧರ ಸ್ವಾಮಿಗಳ ಭಾಷ್ಯದೊಂದಿಗೆ ಶ್ರೀಮದ್ ಭಾಗವತ, ಶ್ರೀರಾಮಾನುಜರ ಶ್ರೀಭಾಷ್ಯ, ವಿದ್ಯಾರಣ್ಯರ ಪಂಚದಶಿ, ಅದಕ್ಕೆ ಶ್ರೀರಾಮಕೃಷ್ಣ ಎಂಬುವವರ ಟೀಕೆ – ಈ ಸಂಸ್ಕೃತ ಗ್ರಂಥಗಳು ಹಾಗೂ ಹಿಂದಿ ಭಾಷೆಯಲ್ಲಿರುವ ಅಧ್ಯಾತ್ಮ ರಾಮಾಯಣ, ಪ್ರೇಮ ವಿಲಾಸ (ಭಕ್ತಿಯ ಕುರಿತು ಗ್ರಂಥ) ಎಂಬ ಗ್ರಂಥಗಳ ಹಸ್ತಪ್ರತಿಗಳು ಇಂದು ನಮಗೆ ಲಭ್ಯವಿವೆ. ಬಾಬಾ ಅವರ ಸುಂದರ ಬರವಣಿಗೆಯಂತೆ ಅವರ ಕಂಠವೂ ಮಧುರ. ಸ್ವಾಮಿ ವಿವೇಕಾನಂದರು, "ನಾನು ಕೇಳಿರುವುದರಲ್ಲಿ ಪವಾಹಾರಿ ಬಾಬಾ ಅವರದು ಅತ್ಯಂತ ಮಧುರವಾದ ಕಂಠ" ಎಂದಿದ್ದಾರೆ.

ಮುಂದೊಂದು ದಿನ ಪವಾಹಾರಿ ಬಾಬಾ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಬೇಕೆಂಬ ನಿರ್ಧಾರವನ್ನು ಕೈಗೊಂಡರು. ತಮ್ಮ ಅಣ್ಣನ ಮಗನಾದ ಬದರಿನಾರಾಯಣನ ಬಳಿ, "ಈ ದಾಸನು ದೇಹವನ್ನು ತ್ಯಜಿಸಿದ ಮೇಲೆ ದೇವರ ಪೂಜೆ ಮತ್ತು ಸದ್ಗ್ರಂಥಗಳ ರಕ್ಷಣಾಭಾರವನ್ನು ವಹಿಸಿಕೊಳ್ಳಬೇಕು" ಎಂದು ಬಹಳ ವಿನಯದಿಂದ ಹೇಳಿದರು. ಆ ಮೂಲಕ ತಾವು ಹೆಚ್ಚು ದಿನಗಳಿರುವುದಿಲ್ಲ ಎಂಬ ಸೂಚನೆಯನ್ನಿತ್ತರು. ಆದರೆ ಬದರಿನಾರಾಯಣನಿಗಾಗಲೀ ಮತ್ತು ಆಶ್ರಮದವರಿಗಾಗಲೀ ಈ ಬಗ್ಗೆ ಅರಿವಾಗಲಿಲ್ಲ. ಅವರು ತಮ್ಮ ಇಹಜೀವನದ ಕಟ್ಟಕಡೆಯ ಕೆಲವು ವರ್ಷಗಳ ಕಾಲ ಯಾರಿಗೂ ದರ್ಶನವನ್ನು ನೀಡುತ್ತಿರಲಿಲ್ಲ. ಬಾಗಿಲ ಹಿಂದೆ ನಿಂತು, ಕೆಲವೇ ಕೆಲವರ ಬಳಿ ಮಾತನಾಡುತ್ತಿದ್ದರು.

ಕ್ರಿ.ಶ. ೧೮೯೮, ಶುಕ್ರವಾರ, ಜ್ಯೇಷ್ಠ ಅಮಾವಾಸ್ಯೆಯ ದಿನದಂದು (ಮೇ–ಜೂನ್) ಮುಂಜಾನೆ ಆಶ್ರಮವಾಸಿಗಳು ಪ್ರಾತಃಕಾಲದ ಕ್ರಿಯೆಗಳನ್ನು ಮುಗಿಸಿ ಕುಳಿತಿದ್ದಾರೆ. ಒಳಗೆ ಆಶ್ರಮದ ಕೋಣೆಯೊಳಗಿನಿಂದ ದಟ್ಟವಾದ ಹೊಗೆಯು ಹೊರಹೊಮ್ಮುತ್ತಿದೆ. ಬಾಬಾಜಿಯವರು ಹೋಮವನ್ನು ಮಾಡುತ್ತಿರಬಹುದು ಎಂದು ತಿಳಿದು ಎಲ್ಲರೂ ಸುಮ್ಮನಾದರು. ಆದರೆ ಹೊಗೆಯು ಬೃಹದಾಕಾರವಾಗಿ ಬೆಳೆದುದ್ದನ್ನು ಕಂಡು ಹೆದರಿದ ಬದರಿನಾರಾಯಣನು, ಆಶ್ರಮದ ಸುತ್ತಲಿದ್ದ ಗೋಡೆಯ ಬಳಿ ಓಡಿಹೋಗಿ, ಆಶ್ರಮವಾಸಿಗಳಿಗೆ ಒಳಗೆ ಬರಲು ಅನುಮತಿಯನ್ನು ನೀಡಬೇಕೆಂದು ಬಾಬಾಜಿಯವರನ್ನು ಪ್ರಾರ್ಥಿಸಿಕೊಂಡನು. ಆದರೆ ಬಾಬಾ ಅದಕ್ಕೆ ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ. ಭಯಗೊಂಡ ಬದರಿನಾರಾಯಣನು ಗೋಡೆಯನ್ನು ಹತ್ತಿ ನೋಡಿದಾಗ, ಬಾಬಾ ಕುಳಿತುಕೊಳ್ಳುವ ಮಂಚವು ಬೆಂಕಿಯಿಂದ ಆವೃತವಾಗಿತ್ತು. ಕೆಲವು ದಿವಸಗಳ ಹಿಂದೆ ಹೋಮಕ್ಕೆ ಬೇಕಾಗುವ ತುಪ್ಪ ಮತ್ತು ಇತರ ಪದಾರ್ಥಗಳನ್ನು ಭಕ್ತರು ಯಥೇಚ್ಛವಾಗಿ ನೀಡಿದ್ದರು. ಪವಾಹಾರಿ ಬಾಬಾ ಅವರು ತಮ್ಮ ಕೂದಲಿಗೆ ತುಪ್ಪವನ್ನು ಸವರಿಕೊಂಡು, ಕೆಲವು ಮಂತ್ರಗಳನ್ನು ಪಠಿಸುತ್ತಾ ದೇಹದ ಮೇಲೆಲ್ಲಾ ಏನನ್ನೋ ಹಚ್ಚಿಕೊಳ್ಳುತ್ತಿದ್ದರು. ಭಯಗ್ರಸ್ತನಾದ ಬದರಿನಾರಾಯಣನು, "ತಾವು ಅನುಮತಿ ನೀಡಿದರೆ, ನಾವುಗಳು ಬಂದು ಬೆಂಕಿಯನ್ನು ನಂದಿಸುತ್ತೇವೆ" ಎಂದನು. ಆದರೆ ಬಾಬಾ ಕಮಂಡಲುವನ್ನು ಹಿಡಿದು ಅವನತ್ತ ಸುಮ್ಮನೆ ನೋಡಿ, ಬೆಂಕಿಯನ್ನು ಪ್ರವೇಶಿಸಿಯೇಬಿಟ್ಟರು.

ಬೃಹದಾಕಾರದ ಬೆಂಕಿಯ ಕೆನ್ನಾಲಗೆಗಳನ್ನು ಮುಂಜಾನೆಯೇ ಕಂಡು ಭೀತಿಯಿಂದ ಅನೇಕ ಹಳ್ಳಿಗರು ಓಡಿಬಂದಿದ್ದರು. ಬದರಿನಾರಾಯಣನು ಎಲ್ಲರಿಗೂ ಪರಿಸ್ಥಿತಿಯನ್ನು ವಿವರಿಸಿದನು. ಬಾಬಾ ಅವರ ಅನುಮತಿಯಿಲ್ಲದೆ ಒಳಗೆ ನುಗ್ಗಲು ಯಾರಿಗೂ ಧೈರ್ಯವಾಗಲಿಲ್ಲ. ಆದರೆ ಹಳ್ಳಿಯ ಪ್ರಮುಖರ ನಿರ್ಧಾರದ ಮೇರೆಗೆ ಕೆಲವರು, ಬಾಬಾ ಅವರ ಕೋಣೆಯ ಬಾಗಿಲನ್ನು ಒಡೆದು ಒಳಗೆ ನುಗ್ಗಿದರು. ಬಾಬಾ, ತಾವು ದಿನಾಲೂ ನೆರವೇರಿಸುತ್ತಿದ್ದ ಹೋಮಕುಂಡದ ಬಳಿ, ಮರದ ಮಂಚದ ಮೇಲೆ, ಪದ್ಮಾಸನದಲ್ಲಿ ನಿಶ್ಚಲರಾಗಿ ಕುಳಿತಿದ್ದರು. ಅಗ್ನಿದೇವನು ಮಂಚದ ಜೊತೆ ಜೊತೆಗೆ ಬಾಬಾ ಅವರ ದೇಹವನ್ನೂ ಸ್ವೀಕರಿಸುತ್ತಿದ್ದನು. ತುಪ್ಪದ ಗಡಿಗೆಗಳು, ಹೋಮದ ಸಾಮಗ್ರಿಗಳು ಮತ್ತು ಕೆಲವು ಶಾಸ್ತ್ರಗ್ರಂಥಗಳನ್ನು ಬಾಬಾ ಪಕ್ಕದಲ್ಲಿರಿಸಿಕೊಂಡಿದ್ದರು. ಮುಂದೇನು ಎಂದು ಯೋಚಿಸುವ ಮೊದಲೇ ಬಾಬಾ ಅವರ ತಲೆಯ ಬ್ರಹ್ಮರಂಧ್ರವು ಒಡೆದು, ಅವರ ಪ್ರಾಣ ವಿಶ್ವಾತ್ಮನಲ್ಲಿ ಐಕ್ಯವಾಯಿತು. ಪುಣ್ಯಮಯವಾಗಿದ್ದ ಅವರ ಶರೀರವು ಪಂಚಭೂತಗಳಲ್ಲಿ ಲೀನವಾಯಿತು.

ಶರಭಂಗ ಮಹಾಋಷಿಯಂತೆ, ಯಾರಿಗೂ ಕಷ್ಟವನ್ನು ಕೊಡಲು ಇಚ್ಛಿಸದೆ, ಹಿಂದೂಶಾಸ್ತ್ರದ ಪ್ರಕಾರ ತಮ್ಮ ಅಂತ್ಯಸಂಸ್ಕಾರವನ್ನು ಬಾಬಾ ತಮಗೆ ತಾವೇ ಮಾಡಿಕೊಂಡರು. ಅವರು ಯೋಗದಿಂದ ಶರೀರವನ್ನು ಬಿಟ್ಟ ಜಾಗದಲ್ಲಿ ನಿರ್ಮಿಸಿರುವ ಸಣ್ಣ ಸ್ಮಾರಕವನ್ನು ಇಂದೂ ಕಾಣಬಹುದು. ಅವರ ವಂಶಸ್ಥರು ಇಂದಿಗೂ ಆ ಆಶ್ರಮದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ.

**ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು, ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ. ನಾನೊಮ್ಮೆ ಒಬ್ಬ ಸಾಧುಮಹಾತ್ಮರನ್ನು (ಅವರು ಪವಾಹಾರಿ ಬಾಬಾ) ನೋಡಿದೆ. ಅವರು ಪೂಜೆ, ಧ್ಯಾನಗಳನ್ನು ಎಷ್ಟು ಏಕಾಗ್ರತೆ ಶ್ರದ್ಧೆಗಳಿಂದ ಮಾಡುತ್ತಿದ್ದರೋ, ಅಷ್ಟೇ ಸಾವಧಾನದಿಂದ ತಾವು ಅಡುಗೆ ಮಾಡುವ ಹಿತ್ತಾಳೆ ಪಾತ್ರೆಗಳನ್ನು ಕೂಡ ಫಳ ಫಳ ಹೊಳೆಯುವ ಚಿನ್ನದಂತೆ ತೊಳೆದಿಡುತ್ತಿದ್ದರು.**

– ಸ್ವಾಮಿ ವಿವೇಕಾನಂದ

ಪುಷ್ಪಾ ಶೇಷಾದ್ರಿ

# ವಿದ್ಯಾರ್ಥಿ ಎಂದರೆ ಯಾರು?



ವಿದ್ಯಾರ್ಥಿ ಅಂದರೆ ಜ್ಞಾನವನ್ನು ತಿಳಿದುಕೊಳ್ಳುವ ಹಂಬಲ ಇರುವವನು. ಜ್ಞಾನವೆಂದರೆ ಬರಿಯ ಪಠ್ಯಪುಸ್ತಕಗಳ ಜ್ಞಾನ ಮಾತ್ರವೇ ಅಲ್ಲ. ಅದರ ಜೊತೆಗೆ ಆಧ್ಯಾತ್ಮಿಕ, ಮಾನಸಿಕ ಮತ್ತು ದೈಹಿಕ ಬೆಳವಣಿಗೆಯೂ ಬೇಕು.

ವಿದ್ಯಾರ್ಥಿಗೆ **'ಸೇವೆ'** ಎಂಬುದು ಜೀವನದ ದಿನನಿತ್ಯದ ಅಂಗವಾಗಿರಬೇಕು. ಈ ಸೇವೆಯಲ್ಲಿ ಹಲವು ವಿಧ: ಗುರುಹಿರಿಯರ ಸೇವೆ, ಸಮಾಜಸೇವೆ, ದೀನದಲಿತರ ಸೇವೆ, ರೋಗಿಗಳ ಸೇವೆ – ಹೀಗೆ ಹಲವು ಬಗೆಯ ಸೇವೆಗಳು. ಇಲ್ಲಿ ನಾವು ಶ್ರೀಮಾತೆ ಶಾರದಾದೇವಿಯವರ ಜೀವನವನ್ನು ನೋಡಬೇಕು. ಶ್ರೀಮಾತೆಯವರು ಯಾವ ರೀತಿಯ ಸೇವೆ ಮಾಡಲೂ ಹಿಂಜರಿಯುತ್ತಿರಲಿಲ್ಲ. ತಮಗೆ ಊಟಕ್ಕೆ ತೊಂದರೆ ಇದ್ದರೂ ಕೂಡ, ತಮ್ಮಲ್ಲಿಗೆ ಬಂದ ಭಕ್ತಾದಿಗಳಿಗೆ, ಅತಿಥಿಗಳಿಗೆ ತಿನ್ನಲು ಏನನ್ನಾದರೂ ಕೊಟ್ಟು ಕಳುಹಿಸುವುದು ಅವರಿಗೆ ರೂಢಿಯಾಗಿ ಹೋಗಿತ್ತು. ಜಾತಿ ಮತ ಕುಲಗಳನ್ನು ಶ್ರೀಮಾತೆ ಎಂದಿಗೂ ನೋಡುತ್ತಿರಲಿಲ್ಲ. ಸೇವೆಯೊಂದೇ ಅವರ ಪರಮಗುರಿಯಾಗಿತ್ತು. ಹೀಗಾಗಿ ವಿದ್ಯಾರ್ಥಿದೆಸೆಯಲ್ಲಿಯೇ ನಾವು ಸೇವಾಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ರಜಾದಿನಗಳಲ್ಲಿ ಹಿರಿಯ ವಿದ್ಯಾರ್ಥಿಗಳು ಸ್ವಲ್ಪವಾದರೂ ಸಮಾಜಸೇವೆ ಮಾಡಿದರೆ ಉತ್ತಮ. ಇದರಿಂದ ನಿಸ್ವಾರ್ಥಭಾವವನ್ನು ಬೆಳೆಸಿಕೊಂಡ ಹಾಗಾಗುತ್ತದೆ.

ವಿದ್ಯಾರ್ಥಿ ಬೆಳೆಸಿಕೊಳ್ಳಬೇಕಾದ ಇನ್ನೊಂದು ಗುಣವೆಂದರೆ **'ಏಕಾಗ್ರತೆ.'** ಓದಿನಲ್ಲಾಗಲಿ, ಬೇರೆ ಯಾವ ಕೆಲಸ ಮಾಡುವುದರಲ್ಲಾಗಲಿ, ಆಸಕ್ತಿ ಹಾಗೂ ಏಕಾಗ್ರತೆ ಬಹಳ ಮುಖ್ಯ. ಇದರಿಂದ ಉತ್ತಮ ಫಲ ಲಭಿಸುವುದು.

ನಾಟ್ಯ ಮಾಡುವಾಗ ನಾಟ್ಯಕ್ಕೆ ತಕ್ಕ ಸಂಗೀತ, ತಾಳವಾದ್ಯಗಳಿದ್ದರೆ ಒಂದು ಮೆರುಗು. ಅದೇ ರೀತಿ ಸಂಗೀತಗಾರರಿಗೆ ತಾಳ, ತಂಬೂರಿ, ಮೃದಂಗಗಳಿದ್ದರೆ ಆ ಸಂಗೀತ ಕೇಳಲು ಇಂಪಾಗಿರುತ್ತದೆ. ಹಾಗೆಯೇ ವಿದ್ಯಾರ್ಥಿಗಳಿಗೆ ಓದಿನಲ್ಲಿ ಉತ್ಸಾಹದ ಜೊತೆಗೆ ಬೇರೆಯವರ ಬಗ್ಗೆ ಕಳಕಳಿ, ಸೇವೆಯಲ್ಲಿ ಆಸಕ್ತಿ, ಸ್ನೇಹಭಾವ ಇದ್ದರೆ ಅವರ ವ್ಯಕ್ತಿತ್ವವು ಶೋಭಿಸುವುದು. ಈ ಗುಣಗಳು ವಿದ್ಯಾರ್ಥಿಯನ್ನು ಮುಂದೆ ಒಬ್ಬ ಒಳ್ಳೆಯ ಪ್ರಜೆಯನ್ನಾಗಿ ರೂಪಿಸಲು ಸಹಕಾರಿಯಾಗಿರುವುವು. "ನಿಮ್ಮ ಸ್ನೇಹಿತರು ಯಾರೆಂಬುದನ್ನು ಹೇಳಿರಿ; ನಾನು ನಿಮ್ಮ ಚಾರಿತ್ರ್ಯದ ಬಗ್ಗೆ ಹೇಳುವೆನು" ಎಂಬ ನಾಣ್ಣುಡಿಯು ನಿಜಕ್ಕೂ ಸತ್ಯವಾದುದು. ಹೀಗಾಗಿ ವಿದ್ಯಾರ್ಥಿಯು ತನ್ನ ಸಹಪಾಠಿಗಳೊಂದಿಗೆ ಸ್ನೇಹಮಾಡುವಾಗ, ಅಂಥವರ ನಡೆ-ನುಡಿ, ಗುಣಗಳನ್ನು ಗಮನಿಸಿ, ಅವರೊಂದಿಗೆ ಒಡನಾಡುವುದು ಒಳ್ಳೆಯದು. ಸಹವಾಸದೋಷವಿದ್ದಲ್ಲಿ, ಆ ಸ್ನೇಹಿತನಂತೆಯೇ ದುರ್ಗುಣಗಳನ್ನು ಪಡೆಯುವುದು ಸ್ವಾಭಾವಿಕ. ಆದ್ದರಿಂದ ಸ್ನೇಹ ಮಾಡುವಾಗ, ಜಾಗರೂಕತೆಯಿಂದ ಒಳ್ಳೆಯವರ ಜೊತೆಗೆ ಮಾತ್ರವೇ ಸ್ನೇಹ ಮಾಡುವುದು ಅತ್ಯವಶ್ಯವಾದುದು.

ವಿದ್ಯಾರ್ಥಿಗಳು ಬೆಳಗ್ಗೆ ಏಳುವುದರಿಂದ ಹಿಡಿದು, ರಾತ್ರಿ ಮಲಗುವವರೆಗೆ ಒಂದು ನಿರ್ದಿಷ್ಟ ದಿನಚರಿಯನ್ನು ಅನುಸರಿಸಬೇಕು. ಹಾಗೆಯೇ ಪ್ರತಿದಿನ ರಾತ್ರಿ ಅಂದಂದಿನ ದಿನಚರಿಯನ್ನು ಬರೆಯುವ ಅಭ್ಯಾಸ ಮಾಡಿಕೊಂಡರೆ ಉತ್ತಮ. ಹೀಗೆ ಮಾಡುವುದರಿಂದ ಶಿಸ್ತಿನ ಜೀವನ ನಡೆಸಬಹುದು. ಎಷ್ಟೋ ಕೆಲಸಗಳನ್ನು ಮಾಡಿಮುಗಿಸಬೇಕೆಂದು ಮನಸ್ಸಿನಲ್ಲಿಯೇ ಅಂದುಕೊಳ್ಳುವೆವು. ಆದರೆ ಅವೆಲ್ಲ ಕಾರ್ಯಗತವಾಗಬೇಕಾದರೆ, ದಿನಚರಿಯಲ್ಲಿ ಅವುಗಳನ್ನು ನಮೂದಿಸಿಕೊಂಡು, ಒಂದಾದ ಮೇಲೆ ಒಂದರಂತೆ ಅವುಗಳನ್ನು ಮಾಡಿಮುಗಿಸುವುದು ಉತ್ತಮ ಅಭ್ಯಾಸ. ನಾಳೆ ಏನೇನು ಮಾಡಬೇಕು ಎನ್ನುವುದನ್ನು ಹಿಂದಿನ ದಿನ ರಾತ್ರಿ ಬರೆದಿಟ್ಟರೆ, ಅದು ನಮ್ಮ ಮನಸ್ಸಿನ ಅಂತರಾಳದಲ್ಲಿ ಅಚ್ಚೊತ್ತಿ ನಿಂತಿರುತ್ತದೆ. ಇದರಿಂದಾಗಿ ಅವುಗಳನ್ನು ಮರೆಯುವ ಸಾಧ್ಯತೆ ಕಡಮೆ. ಇದು ಮುಂದೆ ಶಿಸ್ತಿನ ಜೀವನಕ್ಕೆ ಅಡಿಪಾಯವಾಗುವುದರಲ್ಲಿ ಸಂದೇಹವಿಲ್ಲ.

ಶಾಲಾಕಾಲೇಜುಗಳಲ್ಲಿ ವೇಳಾಪಟ್ಟಿಯ ಪ್ರಕಾರ ಒಂದೊಂದು ವಿಷಯಕ್ಕೆ ಒಂದೊಂದು ಅವಧಿಯನ್ನು ನಿರ್ಧಾರ ಮಾಡಿರುತ್ತಾರೆ. ಅದರಂತೆ ಪಾಠಪ್ರವಚನಗಳು ನಡೆಯುತ್ತಿರುತ್ತವೆ. ಹಾಗೆಯೇ ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿಯೂ ಇಂಥ ವೇಳಾಪಟ್ಟಿಯನ್ನು ಮಾಡಿಕೊಂಡು ಅದರಂತೆ ನಡೆದುಕೊಂಡರೆ, ಪರೀಕ್ಷೆಯ ಸಮಯದಲ್ಲಿ ಪರದಾಟ ಪಡುವುದು ತಪ್ಪುತ್ತದೆ. ಶಿಸ್ತಿನ ದಿನಚರಿಯಲ್ಲಿ ಹಿತಮಿತವಾದ ವ್ಯಾಯಾಮ, ಸಂಜೆಯ ವೇಳೆಯಲ್ಲಿ ಆಟೋಟಗಳನ್ನೂ ಸೇರಿಸಿಕೊಳ್ಳಬೇಕು. ಟಿ.ವಿ. ಯನ್ನು ಅತಿಯಾಗಿ ನೋಡುವುದನ್ನು ಬಿಡಬೇಕು.

ಇದೆಲ್ಲಕ್ಕೂ 'ಸ್ವ-ಪ್ರಯತ್ನ'ವನ್ನು ಆರಂಭದಲ್ಲಿಯೇ ಮಾಡಬೇಕು. ನಮ್ಮ ಇಚ್ಛಾಶಕ್ತಿಯನ್ನು ಒಳ್ಳೆಯ ಕಾರ್ಯಗಳಲ್ಲಿ ಹರಿಯಬಿಡಬೇಕು. ಸ್ವಾಮಿ ವಿವೇಕಾನಂದರು ಹೇಳುವಂತೆ, ನಮ್ಮ ಮನಸ್ಸಿನ ಶಕ್ತಿಯನ್ನು ಪೋಲು ಮಾಡದೆ, ಯಾವತ್ತೂ ಅದನ್ನು ನಾವು ಅವಶ್ಯವಾಗಿ ಮಾಡಬೇಕಾದ ಕಾರ್ಯಗಳಲ್ಲಿ ವಿನಿಯೋಗಿಸಬೇಕು.